ದಲ್ಲದೆ, ಮಹಾರಾಷ್ಟ್ರದ ಬಗ್ಗೆ ಪೂರ್ಣಾಭಿಮಾನವಿತ್ತು. ಕಾಂಗ್ರೆಸ್ ಅಧಿವೇಶನ ನೆಪದಲ್ಲಿ ಗಂಗಾಧರರಾಯರು ಎಲ್ಲಿ ಬೆಳಗಾಂವಿಯನ್ನು ಮಹಾರಾಷ್ಟ್ರಕ್ಕೆ ಒಪ್ಪಿಸುವರೋ ಎನ್ನುವ ಭಯ ಕನ್ನಡ ನಾಯಕರ ಮನಸ್ಸಿನಲ್ಲಿತ್ತು. ಆದರೆ ದೈವವಶಾತ್ ಅಂತಹ ಅನರ್ಥ ಸಂಭವಿಸಲಿಲ್ಲ.

ಬೆಳಗಾಂವಿಯ ಅಧಿವೇಶನಕ್ಕೆ ಮಹಾತ್ಮಾ ಗಾಂಧಿಯವರೇ ಅಧ್ಯಕ್ಷರಾಗಿ ದೊರೆತುದು ಅಧಿವೇಶನದ ಕಳೆಯನ್ನು ನೂರ್ಮಡಿಗೊಳಿಸಿತ್ತು. ಗಾಂಧೀಜಿ ತಮ್ಮ ಅಧ್ಯಕ್ಷ ಭಾಷಣದಲ್ಲಿ ಕರ್ನಾಟಕ ಏಕೀಕರಣ ಪ್ರಶ್ನೆಯನ್ನು ಪ್ರಸ್ತಾಪಿಸಿ, ‘ತಮ್ಮ ಭಾಷೆಯ ಪ್ರತ್ಯೇಕ ಪ್ರಾಂತ್ಯ ಬೇಕೆಂದು ಕನ್ನಡಿಗರು ಹೂಡಿರುವ ವಾದ ಸಮಂಜಸವಾಗಿದೆ. ಅದರ ಬೇಡಿಕೆಯನ್ನು ತಿರಸ್ಕರಿಸಲು ಸಾಧ್ಯವಿಲ್ಲ’ ಎಂದು ಹೇಳಿದರು, ಗಾಂಧೀಜಿಯವರ ಸಮರ್ಥನೆ ಏಕೀಕರಣವಾದಿಗಳ ಮಹದ್ವಿಜಯವಾಗಿತ್ತು.

ಕಾಂಗ್ರೆಸ್ ಅಧಿವೇಶನಕ್ಕೆ ಸ್ವಯಂಸೇವಕರನ್ನು ಕಳಿಸಲು ಡಾ. ಎನ್.ಎಸ್. ಹರ್ಡಿಕರ್ ಅವರು ಬೆಂಗಳೂರಿನಲ್ಲಿ ಒಂದು ‘ತರಬೇತಿ ಶಿಬಿರ’ವನ್ನು ತೆಗೆದರು. ಟಿಪ್ಪೂ ಸುಲ್ತಾನ್ ಅರಮನೆಯ ಮುಂದಿನ ಬಯಲೇ ‘ಶಿಬಿರಾಲಯ’ವಾಗಿತ್ತು.

ವೈದ್ಯಕೀಯ ಶಿಕ್ಷಣಕ್ಕಾಗಿ ಅಮೇರಿಕಾಕ್ಕೆ ಹೋಗಿದ್ದ ಹರ್ಡಿಕರ ನಾರಾಯಣರಾಯರು ಅಲ್ಲಿ ಲಾಲಾ ಲಜಪತರಾಯರ ಪ್ರಭಾವಕ್ಕೆ ಒಳಗಾಗಿ ತ್ರಿಕರಣಪೂರ್ವಕವಾಗಿ ದೇಶಸೇವೆಗೆ ನಿಂತರು. ಇದಕ್ಕೆ ಪೂರ್ವದಲ್ಲಿ ಡಾಕ್ಟರನ್ನು ನಾನು ಕೆಲವು ಸಲ ದೇಶೀಯ ವಿದ್ಯಾಶಾಲೆಯಲ್ಲಿ ನೋಡಿದ್ದೆ, ಅವರ ಭಾಷಣಗಳನ್ನು ಕೇಳಿದ್ದೆ.

ರಾಜಕೀಯ ಮುಖಂಡರಲ್ಲಿ ಭಾಷಣ ಮಾಡುವುದರ ಬಗ್ಗೆ ಉಪೇಕ್ಷೆ ತಳೆದಿದ್ದವರು ಡಾಕ್ಟರು ಒಬ್ಬರೇ ಎಂದು ಕಾಣುತ್ತದೆ. ಮಾತಿನ ಮಲ್ಲರನ್ನು ಕಂಡರೆ ಡಾಕ್ಟರಿಗೆ ಅಪಾರ ಬೇಸರ. ವಿಧಿಯಿಲ್ಲದೆ ಇವರು ಆಗಾಗ್ಗೆ ಭಾಷಣ ಬಂದಾಗ ಸಿಡಿಲಿನಂಥ ನಾಲ್ಕು ಮಾತುಗಳನ್ನಾಡಿ ಕೂಡುತ್ತಿದ್ದರು. ಡಾಕ್ಟರ್ ಮಾತುಗಾರರಾಗಿರಲಿಲ್ಲ. ಆದರೆ ಅವರ ಕೆಲವೇ ಮಾತುಗಳಲ್ಲಿ ಅವರ



ಪ್ರಖರ ದೇಶಾಭಿಮಾನ, ತತ್ವನಿಷ್ಠೆ, ಕಾರ್ಯದಕ್ಷತೆ, ಸತ್ಯಪ್ರಿಯತೆ ಎದ್ದು ಕಾಣುತ್ತಿದ್ದವು.

ಸ್ವಯಂಸೇವಕ ಶಿಬಿರದಲ್ಲಿ ಶಿಸ್ತು ಅನಿವಾರ್ಯವಾಗಿತ್ತು. ಡಾಕ್ಟರರಂತೂ ಶಿಸ್ತಿನ ಸಿಪಾಯ್, ನಾನು ತದ್ವಿರುದ್ಧ. ಆದರೂ ಡಾಕ್ಟರ ಮೇಲಣ ಗೌರವಾದರಗಳಿಂದ ನಾನು ಸ್ವಯಂಸೇವಕನಾಗಿ ಸೇರಿದೆ. ಬೆಳಗ್ಗೆ ಐದಕ್ಕೆ ಎದ್ದು ಕವಾಯತ್ ಮಾಡಬೇಕಾಗಿತ್ತು. ಕವಾಯತ್ ಮುಗಿದ ತರುವಾಯ ದೇಶ ವರ್ಣನೆ, ಕಾಂಗ್ರೆಸ್ ಅಧಿವೇಶನಕ್ಕೆ ಬರುವ ಅತಿಥಿಗಳ ಪ್ರಾಂತ್ಯ ವೈಲಕ್ಷಣಗಳು, ಸ್ವಯಂಸೇವಕರ ವರ್ತನೆ ಇತ್ಯಾದಿ ವಿಷಯಗಳ ಮೇಲೆ ತರಗತಿಗಳು ನಡೆಯುತ್ತಿದ್ದವು. ನಾನು ಹಾಗೂ ಹೀಗೂ ಶಿಕ್ಷಣವನ್ನೇನೋ